# ಎಷ್ಟೊಂದು ಚೆಂದ

ಎಷ್ಟೊಂದು ಬಣ್ಣ
ಎಷ್ಟೊಂದು ಕಣ್ಣ
ಈ ನವಿಲ ಗರಿಗಳಲ್ಲಿ!

ಎಷ್ಟೊಂದು ಪುಳಕ
ಎಷ್ಟೊಂದು ತವಕ
ಈ ಹರಿವ ನದಿಗಳಲ್ಲಿ!

ಎಷ್ಟೊಂದು ಹೊಳಪು
ಎಷ್ಟೊಂದು ರೂಪು
ಆಕಾಶ ಬುಟ್ಟಿಯಲ್ಲಿ!

ಎಷ್ಟೊಂದು ಕಂಪು
ಎಷ್ಟೊಂದು ತಂಪು
ಈ ಸಸ್ಯ ರಾಶಿಯಲ್ಲಿ!

ಎಷ್ಟೊಂದು ರಭಸ
ಎಷ್ಟೊಂದು ಸರಸ
ಈ ಕಡಲ ಅಲೆಗಳಲ್ಲಿ!

ಎಷ್ಟೊಂದು ಹಸಿರು
ಎಷ್ಟೊಂದು ಕುಸುರು
ಪರಿಸರದ ಹೃದಯದಲ್ಲಿ!

ಎಷ್ಟೊಂದು ಇಂಪು
ಎಷ್ಟೊಂದು ಸೊಂಪು
ಈ ಹಕ್ಕಿ ಕಂಠದಲ್ಲಿ!

ಎಷ್ಟೊಂದು ನಲಿವು
ಎಷ್ಟೊಂದು ಚೆಲುವು
ಈ ಬ್ರಹ್ಮ ಸೃಷ್ಟಿಯಲ್ಲಿ!

**– ಅಮೃತೇಶ್**
**ತಂಡರ, ಅಣ್ಣಿಗೇರಿ**



# ನರಿಯ ಉಪವಾಸ

ಒಂದು ಕಾಡಿನಲ್ಲಿ ಒಂದು ಬಡಕಲು ನರಿ ಇತ್ತು. ಒಮ್ಮೆ ಅದು ಸುತ್ತಾಡುತ್ತಾ ಸುತ್ತಾಡುತ್ತಾ ದಾರಿ ತಪ್ಪಿ ಕಾಡು ದಾಟಿ ಊರಿನತ್ತ ಬಂದಿತು. ಊರಿನ ಹೊರ ವಲಯದಲ್ಲಿ ಹಣ್ಣು ಬಿಟ್ಟ ಮರಗಳುಳ್ಳ ಸುಂದರವಾದ ತೋಟವೊಂದನ್ನು ನೋಡಿತು. ರಸಭರಿತ ಹಣ್ಣುಗಳನ್ನು ನೋಡಿ ನರಿಯ ಬಾಯಲ್ಲಿ ನೀರೂರಿತು.

ತೋಟದ ಮಾಲೀಕ ತೋಟಕ್ಕೆ ಭದ್ರವಾದ ಬೇಲಿ ಹಾಕಿಸಿದ್ದ. ಅದರ ಒಳಕ್ಕೆ ನುಗ್ಗುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ನರಿ ಸುಲಭವಾಗಿ ಸೋಲೊಪ್ಪಿಕೊಳ್ಳುವ ಪ್ರಾಣಿಯಲ್ಲ. ಅದು ಬೇಲಿಯನ್ನೇ ಗಮನಿಸುತ್ತ ತೋಟವನ್ನು ಸುತ್ತು ಹಾಕಿತು. ಆಗ ಅದರ ಸೂಕ್ಷ್ಮ ಕಣ್ಣುಗಳಿಗೆ ಭದ್ರವಾದ ಬೇಲಿಯಲ್ಲಿದ್ದ ಒಂದು ಕಿಂಡಿ ಕಾಣಿಸಿತು. ಅದರ ಮೂಲಕ ತೂರಿ ಒಳಕ್ಕೆ ಹೋಗಲು ನರಿ ಪ್ರಯತ್ನಿಸಿದಾಗ ಒಳಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಏಕೆಂದರೆ ಕಿಂಡಿ ಸಣ್ಣದಿತ್ತು. ನರಿಯು ಕಿಂಡಿಗಿಂತ ದಪ್ಪಗಿತ್ತು. ಆ ಕಿಂಡಿಯ ಮೂಲಕ ತೂರಿ ಹೋಗುವುದು ಹೇಗೆಂದು ನರಿ ಯೋಚಿಸುತ್ತ ಕುಳಿತುಕೊಂಡಿತು.

ನರಿಗೆ ಒಂದು ಉಪಾಯ ಹೊಳೆಯಿತು. ಅದು ತಕ್ಷಣ ಅಲ್ಲಿಯೇ ಕುಳಿತು ಉಪವಾಸವನ್ನಾರಂಭಿಸಿತು. ಮೂರೇ ದಿನಗಳ ಉಪವಾಸ  ಮಾಡುವಷ್ಟರಲ್ಲಿ ದಪ್ಪ ನರಿಯು ಕಿಂಡಿಯ ಮೂಲಕ ಸರಾಗವಾಗಿ ಹೋಗುವಷ್ಟು ಸಣ್ಣದಾಗಿತ್ತು. ನರಿಯು ಕಿಂಡಿಯ ಮೂಲಕ ತೂರಿ ತೋಟದೊಳಕ್ಕೆ ಹೋಯಿತು. ತೋಟದಲ್ಲಿದ್ದ ವಿವಿಧ ಬಗೆಯ ರಸಭರಿತ ಹಣ್ಣುಗಳನ್ನು ತಿನ್ನಲಾರಂಭಿಸಿತು. ತಿನ್ನುವುದರಲ್ಲೇ ಮೈಮರೆತಿದ್ದ  ಅದಕ್ಕೆ ದಿನ ಕಳೆದಿದ್ದೇ ಗೊತ್ತಾಗಲಿಲ್ಲ. ಒಂದು ವಾರ ತೋಟದೊಳಗೆ ನರಿ ಸಿಹಿ ಹಣ್ಣುಗಳನ್ನು ತಿನ್ನುತ್ತಲೇ ಇತ್ತು.

ಅನಂತರ ನರಿಗೆ ಇನ್ನು ಸಿಹಿ ಹಣ್ಣು ತಿನ್ನುವುದು ಸಾಕು, ಏನಾದರೂ ಖಾರವಾದುದನ್ನು ತಿನ್ನಬೇಕೆನಿಸಿತು. ತೋಟದಿಂದ ಹೊರಕ್ಕೆ ಹೋಗೋಣವೆಂದು ಕಿಂಡಿಯ ಬಳಿಗೆ ಬಂದಾಗ ಅದಕ್ಕೆ ಕಿಂಡಿಯ ಮೂಲಕ ತೂರಿ ಹೋಗಲು ಸಾಧ್ಯವಾಗಲಿಲ್ಲ. ಏಕೆಂದರೆ ಕಿಂಡಿ ಮೊದಲಿನಷ್ಟೇ ಇತ್ತು. ಆದರೆ ಒಂದು ವಾರದ ಪುಷ್ಕಳ ಭೋಜನದಿಂದಾಗಿ ನರಿ ದಪ್ಪಗಾಗಿತ್ತು! ನರಿಗೆ ಕಿಂಡಿಯ ಮೂಲಕ ತೂರಿ ಬರುವ ಉಪಾಯ ಗೊತ್ತಿಲ್ಲವೇ? ಅದು ಮತ್ತೆ ಮೂರು ದಿನ ಉಪವಾಸ ಮಾಡಿ ಸಣ್ಣಗಾಯಿತು. ಅನಂತರ ಸರಾಗವಾಗಿ ಕಿಂಡಿಯ ಮೂಲಕ ತೂರಿ ತೋಟದಿಂದ ಹೊರಗಿನ ಪ್ರಪಂಚಕ್ಕೆ ಬಂತು.

**–ವಿ.ಹೇಮಂತ ಕುಮಾರ್,**
**ಬೆಂಗಳೂರು**

